**9 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,**
**ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.**

**ಎಸ್.ಸಿ.ನಂ.137/2020**

**(ಚಾ.ಸಾ.6/ಪ್ರಾ.ಸಾ.6)**

ತಾಃ 22.07.2025 ರಂದು ಸಾಕ್ಷಿಗೆ ಪ್ರಮಾಣ ವಚನ ಮಾಡಿಸಲಾಯಿತು.

| | |
|---|---|
| ಸಾಕ್ಷಿದಾರರ ಹೆಸರು: | ಕೃಷ್ಣಪ್ಪ |
| ತಂದೆಯ ಹೆಸರು | ಸಿದ್ದಪ್ಪ |
| ವಯಸ್ಸು | 68 ವರ್ಷ |
| ಉದ್ಯೋಗ | ಏನು ಇಲ್ಲ |
| ವಾಸ ಸ್ಥಳ | ಗಿರಿಯನಪಾಳ್ಯ |

**<u>ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ</u>**

ಚಾಸಾ.1/ರಾಜೇಶ ನನಗೆ ಗೊತ್ತಿಲ್ಲ. ಆರೋಪಿಗಳು ನನಗೆ ಪರಿಚಯ ಇಲ್ಲ. ನಾನು ಚಾಸಾ.1 ರಾಜೇಶರವರಿಗೆ ಮನೆಯನ್ನು ಬಾಡಿಗೆಗೆ ನೀಡಿರುವುದಿಲ್ಲ. ಪೊಲೀಸರು ನನ್ನ ಹೇಳಿಕೆ ಪಡೆದಿಲ್ಲ. ಆದರೆ ಒಂದು ದಾಖಲೆಗೆ ಸಹಿ ಪಡೆದಿದ್ದಾರೆ. ಆರೋಪಿಗಳನ್ನು ಪೊಲೀಸರು ನನಗೆ ತೋರಿಸಿರುವುದಿಲ್ಲ ಮತ್ತು ಮರುಹೇಳಿಕೆ ಪಡೆದಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಸರ್ಕಾರಿ ಅಭಿಯೋಜಕರು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದಾರೆ. ಅನುಮತಿ ನೀಡಲಾಯಿತು.)

ಎಸ್.ಸಿ.ನಂ.137/2020
ಚಾ.ಸಾ.6/ಪ್ರಾ.ಸಾ.6

<u>**ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ**</u>

2. ನಾನು ಪೊಲೀಸರಿಗೆ ನೀಡಿದ ಹೇಳಿಕೆಯಲ್ಲಿ ಚಾಸಾ.1 ರವರಿಗೆ ಲಗ್ಗೆರೆಯಲ್ಲಿ ಇರುವ ನನ್ನ ಒಂದು ಮನೆಯನ್ನು ರೂ.10,000/- ಮುಂಗಡ ಹಣ ಮತ್ತು ರೂ.2,500/- ತಿಂಗಳ ಬಾಡಿಗೆಯಂತೆ ಮಾತುಕತೆ ಆಗಿತ್ತು, ಆದರೆ ಕರಾರು ಪತ್ರ ಆಗಿರುವುದಿಲ್ಲ. ಆ ಪೈಕಿ ನಾನು ರೂ.5,000/- ಮುಂಗಡ ಹಣ ಪಡೆದಿದ್ದು ದಿಃ17.02.2020 ರಂದು ಚಾಸಾ.1 ರವರು ಇಬ್ಬರು ವ್ಯಕ್ತಿಗಳೊಂದಿಗೆ ನಮ್ಮ ಮನೆ ಬಳಿ ಬಂದು ಮುಂಗಡ ಹಣ ರೂ.5000/- ಗಳನ್ನು ವಾಪಸ್ ಕೊಡಿ ಮನೆ ಖಾಲಿ ಮಾಡುತ್ತಿದ್ದೇ ಎಂದು ಹೇಳಿದ್ದರಿಂದ ನಾನು ಆ ಹಣವನ್ನು ಆತನಿಗೆ ಕೊಟ್ಟಿದ್ದೇನೆ ಆ ನಂತರ ಚಾಸಾ.1 ರವರು ಮನೆಯಿಂದ ಸಾಮಾನುಗಳನ್ನು ತೆಗೆದುಕೊಂಡು ಬಸ್ ಚಾರ್ಜ್ ಗೆ ರೂ.100/- ಸಾಲ ಪಡೆದುಕೊಂಡು ಊರಿಗೆ ಹೋಗುವುದಾಗಿ ಹೇಳಿ ಹೋದನು ಎಂದರೆ ಸುಳ್ಳು. ನಂತರ ಚಾಸಾ.1 ರವರೊಂದಿಗೆ ಬಂದಿದ್ದ ಇತರೆ ವ್ಯಕ್ತಿಗಳು ಮೊಬೈಲ್ ಕಳುವು ಮಾಡಿರುವುದಾಗಿ ಅಪಹರಣ ಮಾಡಿಕೊಂಡು ಅಂಜನಾನಗರದ ಕಾಡಿಗೆ ಕರೆದುಕೊಂಡು ಹೋಗಿ ಪ್ರಸನ್ನ ಕುಮಾರನ ಕೊಲೆ ಮಾಡಿರುವ ವಿಚಾರ ತಿಳಿಯಿತು ಎಂದು ಮತ್ತು ಆ ವ್ಯಕ್ತಿಗಳನ್ನು ನೋಡಿದರೆ ಗುರುತಿಸುತ್ತೇನೆ ಎಂದು ಈಗ ಓದಿ ಹೇಳಿದಂತೆ ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ನಿ.ಪಿ.15 ಎಂದು ಗುರುತಿಸಲಾಯಿತು.

3. ದಿಃ29.02.2020 ರಂದು ನಾನು ಪೊಲೀಸರಿಗೆ ಮರುಹೇಳಿಕೆ ನೀಡಿ, ದಿಃ16.02.2020 ರಂದು ರಾಜೇಶ, ಪ್ರಸನ್ನ ಕುಮಾರ ಮತ್ತು ಚಂದು ಎಂಬುವವರನ್ನು ಅಪಹರಣ ಮಾಡಿ ಹಲ್ಲೆ ನಡೆಸಿ ಪ್ರಸನ್ನ ಕುಮಾರ್ ರವರನ್ನು ಕೊಲೆ ಮಾಡಿದ ಆರೋಪಿಗಳ

ಪೈಕಿ 1, 2 ಮತ್ತು 5ನೇ ಆರೋಪಿಗಳನ್ನು ನೋಡಿ ಅವರ ಹೆಸರು, ವಿಳಾಸ ಕೇಳಿವಿ ತಿಳಿದುಕೊಂಡು ಆ ವ್ಯಕ್ತಿಗಳು ಚಾಸಾ.1 ರವರೊಂದಿಗೆ ಮುಂಗಡ ಹಣ ಪಡೆಯಲು ಬಂದಿದ್ದರು ಎಂದು ಮತ್ತು ಅವರನ್ನು ನೋಡಿದರೆ ಗುರುತಿಸುತ್ತೇನೆ ಎಂದು ಈಗ ಓದಿ ಹೇಳಿದಂತೆ ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ನಿ.ಪಿ.16 ಎಂದು ಗುರುತಿಸಲಾಯಿತು. ನಿ.ಪಿ.15 ಮತ್ತು 16 ರಂತೆ ಹೇಳಿಕೆ ನೀಡಿದ್ದರೂ ಸಹ ಈಗ ಆರೋಪಿಗಳಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿಗಳ ಪರ ವಕೀಲರಿಂದಃಏನು ಇಲ್ಲ.**

**ಮರುವಿಚಾರಣೆಃಇಲ್ಲ.**

(ಮೇಲ್ಕಂಡ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಿದೆ.)

ಓ. ಹೇ. ಕೇ. ಸ. ಸಹಿ ಮಾಡಿದ್ದಾರೆ.

(ವಿಜಯ್ ಕುಮಾರ್)
9ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.